**ದಿನಾಂಕ - 25-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ವಾದಿಯರ ಪರ ಶ್ರೀಮತಿ ವಿ.ವಿ.ಆರ್ ವಕೀಲರಿಂದಃ**

ನಾನು ಬಾವಿ ತೋಡುವ ಕೆಲಸ ಮಾಡುತ್ತೇನೆ. ನನ್ನ ಅಣ್ಣನಾದ ವಾದಿ ಶಂಕರ ಪೂಜಾರಿ ಮಹಾರಾಷ್ಟ್ರದ ಕರಾಡ್ ಜಿಲ್ಲೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದನು. ಆತ ಅನಕ್ಷರಸ್ಥ ಎಂದರೆ ಸರಿ. ಸಾಕ್ಷಿ ಮುಂದುವರಿದು, 2 ನೇ ತರಗತಿ ತನಕ ಶಾಲೆಗೆ ಹೋಗಿರುತ್ತಾನೆ ಎನ್ನುತ್ತಾರೆ. ನಾನು 5 ನೇ ತರಗತಿ ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿ ತನಗೆ 14 ವರ್ಷ ಪ್ರಾಯವಾಗಿದ್ದಾಗ ಮಹಾರಾಷ್ಟ್ರಕ್ಕೆ ಹೋಗಿರುತ್ತಾನೆ ಎಂದರೆ ಸರಿ. ನನ್ನ ತಾಯಿ ಶೇಶಿ ಪೂಜಾರಿ ಅನಕ್ಷರಸ್ಥೆ ಎಂದರೆ ಸರಿ. ನನ್ನ ಅಣ್ಣ ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಿದ್ದಾಗ ಖರ್ಚಿಗೆ ಹಣ ಕಳುಹಿಸುತ್ತಿದ್ದನು ಎಂದರೆ ಸರಿಯಲ್ಲ.

2. ನಾವೆಲ್ಲರೂ 2011 ರ ತನಕ ದಾವಾ ಆಸ್ತಿಯಲ್ಲಿ ಇರುವ **ಮಾತೋಶ್ರೀ** ಮನೆಯಲ್ಲಿ ವಾಸವಾಗಿದ್ದೆವು ಎಂದರೆ ಸಾಕ್ಷಿ, ವಾದಿ ಮಹಾರಾಷ್ಟ್ರದಲ್ಲಿ ವಾಸವಾಗಿದ್ದು, ಬಂದು ಹೋಗಿ ಮಾಡುತ್ತಿದ್ದನು ಎನ್ನುತ್ತಾರೆ. ಅಬ್ಬಕ್ಕ ಪೂಜಾರಿ ನನ್ನ ತಾಯಿಯ ತಾಯಿ ಎಂದರೆ ಸರಿ. ಆಕೆಗೆ ಅಂಗಾರ ಪೂಜಾರಿ, ಶೇಶಿ, ತುಂಗು ಹಾಗೂ ಲಕ್ಷ್ಮೀ ಎನ್ನುವ ಮಕ್ಕಳು ಇದ್ದರು ಎಂದರೆ ಸರಿ. ಶೇಶಿ ನನ್ನ ಹಾಗೂ ವಾದಿಯ ತಾಯಿ. ಅಂಗಾರ ಪೂಜಾರಿ 1994 ರಲ್ಲಿ ಮೃತಪಟ್ಟಿರುತ್ತಾರೆ.

3. ಅಂಗಾರ ಪೂಜಾರಿಗೆ ಪ್ರತಿವಾದಿ ನಂಬ್ರ.22 ರಿಂದ 24 ರವರು ಮಕ್ಕಳು ಎಂದರೆ ಸರಿ. ಆತನ ಇಬ್ಬರು ಹೆಂಡತಿಯರು ಮೃತಪಟ್ಟಿರುತ್ತಾರೆ. ನಮ್ಮ ತಾಯಿಯಾದ ಶೇಶಿಗೆ ನಾನು, ವಾದಿ ಶಂಕರ, 2 ನೇ ಪ್ರತಿವಾದಿ ಜಾನಕಿ ಹಾಗೂ ಮೃತ ಸರಸು ಮಕ್ಕಳು ಇರುತ್ತಾರೆ. ಸದರಿ ಸರಸುರವರಿಗೆ ಮಕ್ಕಳು ಜನಿಸಿರುವುದಿಲ್ಲ.

4. 3 ನೇ ಪ್ರತಿವಾದಿಯ 2 ನೇ ಪ್ರತಿವಾದಿ ಜಾನಕಿಯ ಮಗಳು ಎಂದರೆ ಸರಿ. ನನ್ನ ತಾಯಿಯ ಅಕ್ಕ ತುಂಗು ಮೃತಪಟ್ಟಿರುತ್ತಾರೆ. ಆಕೆಗೆ 4 ನೇ ಪ್ರತಿವಾದಿ ರಾಮ ಹಾಗೂ ಸಂಕಿ ಎನ್ನುವ ಮಕ್ಕಳು ಇದ್ದರು. ಪ್ರತಿವಾದ ನಂಬ್ರ.11 ರಿಂದ 15 ರವರು ಹಾಗೂ ಮೃತ ಸುಂದರಿ ಎನ್ನುವವರು ಸಂಕಿಯ ಮಕ್ಕಳು. ಸದರಿ ಸುಂದರಿಯವರಿಗೆ ಪ್ರತಿವಾದಿ ನಂಬ್ರ.16 ರಿಂದ 21 ಮಕ್ಕಳು ಎಂದರೆ ಸರಿ. 16 ನೇ ಪ್ರತಿವಾದಿಗೆ 02 ಗಂಡು ಮಕ್ಕಳು ಜನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 17 ನೇ ಪ್ರತಿವಾದಿಗೆ 02 ಜನ ಹೆಣ್ಣು ಮಕ್ಕಳು ಜನಿಸಿದ್ದಾರೆ ಎಂದರೆ ಸರಿ. ಅವರ ಹೆಸರು ಗೊತ್ತಿಲ್ಲ. 18 ನೇ ಪ್ರತಿವಾದಿಗೆ 02 ಗಂಡು ಮಕ್ಕಳು ಜನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 20 ನೇ ಪ್ರತಿವಾದಿಗೆ ಒಂದು ಗಂಡು ಮಗು ಜನಿಸಿದೆ ಎಂದರೆ ನನಗೆ ಗೊತ್ತಿಲ್ಲ. ಅವರೆಲ್ಲರೂ ದೂರ ವಾಸವಿದ್ದಾರೆ. 13 ಹಾಗೂ 14 ನೇ ಪ್ರತಿವಾದಿಯರಿಗೆ ತಲಾ ಒಂದು ಗಂಡು ಹಾಗೂ ಒಂದು ಹೆಣ್ಣು ಮಕ್ಕಳು ಜನಿಸಿದ್ದಾರೆ ಎಂದರೆ ಸರಿ. ಅವರೆಲ್ಲರ ಹೆಸರು ನನಗೆ ಗೊತ್ತಿಲ್ಲ.

5. ನನ್ನ ತಾಯಿಯ ಸಹೋದರಿ ಲಕ್ಷ್ಮೀ ಮೃತಪಟ್ಟಿದ್ದು, ಆಕೆಯ ಇಬ್ಬರು ಮಕ್ಕಳಾದ ಶೇಖರ ಹಾಗೂ ಬೇಬಿ ಕೂಡ ಮೃತಪಟ್ಟಿದ್ದಾರೆ ಎಂದರೆ ಸರಿ. ಸದರಿ ಶೇಖರನಿಗೆ 8 ರಿಂದ 10 ನೇ ಪ್ರತಿವಾದಿಯರು ಮಕ್ಕಳು ಎಂದರೆ ಸರಿ. ಬೇಬಿಗೆ 5 ರಿಂದ 7 ನೇ ಪ್ರತಿವಾದಿಯರು ಹಾಗೂ ಮೃತ ವಿಶ್ವನಾಥ ಮಕ್ಕಳು ಎಂದರೆ ಸರಿ. ಸಾಕ್ಷಿ ಮುಂದುವರಿದು, 5 ನೇ ಪ್ರತಿವಾದಿ ವಸಂತ ಈಗ 2-3 ವರ್ಷಗಳ ಹಿಂದೆ ಮೃತಪಟ್ಟಿದ್ದಾನೆ ಎನ್ನುತ್ತಾರೆ. 7 ನೇ ಪ್ರತಿವಾದಿಗೆ 02 ಜನ ಗಂಡು ಮಕ್ಕಳು ಎಂದರೆ ಸರಿ.

6. ಮೇಲೆ ಹೇಳಿದಂತೆ ವಾದಿ, ವಂಶವೃಕ್ಷದಲ್ಲಿ ಕಾಣಿಸಿದ ಎಲ್ಲರೂ ಕೂಡ ವ್ಯಾಜ್ಯದ ಆಸ್ತಿಗೆ ಸಂಬಂದಿಸಿದಂತೆ ಕುಟುಂಬದ ಸದಸ್ಯರು ಎಂದರೆ ಸರಿ. ಅಂಗಾರ ಪೂಜಾರಿ ತನ್ನ ಜೀವಿತ ಕಾಲದಲ್ಲಿ ನಮ್ಮ ಕುಟುಂಬದ ಯಜಮಾನರಾಗಿದ್ದರು ಎಂದರೆ ಸರಿ. ಅಂಗಾರ ಪೂಜಾರಿ ನಿಪಿ.2 ರಂತೆ ಕುಟುಂಬದ ಪರವಾಗಿ ಭೂ ನ್ಯಾಯ ಮಂಡಳಿಗೆ ಅದಿಭೋಗದಾರಿಕೆ ಹಕ್ಕು ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರಿದು, ಆತ ತನ್ನ ಹಾಗೂ ತನ್ನ ತಂಗಿಯರಾದ ತುಂಗು, ಶೇಶಿ ಹಾಗೂ ಲಕ್ಷ್ಮೀಯವರ ಪರವಾಗಿ ಅರ್ಜಿ ಸಲ್ಲಿಸಿದ್ದರು ಎನ್ನುತ್ತಾರೆ. ಭೂ ನ್ಯಾಯ ಮಂಡಳಿಗೆ ಸಲ್ಲಿಸಲಾದ ಅರ್ಜಿಯಲ್ಲಿ ಕಾಣಿಸಿದ ದಾವಾ 1 ರಿಂದ 6ನೇ ಆಸ್ತಿಯನ್ನು ಅಂಗಾರ ಪೂಜಾರಿಯರ ತಂದೆ ಕೂಕ್ರ ಪೂಜಾರಿ ಗೇಣಿಗೆ ಪಡೆದುಕೊಂಡಿದ್ದರು. ಕುಟುಂಬದ ಪರವಾಗಿ ಅಂಗಾರ ಪೂಜಾರಿಯವರಿಗೆ ಸದರಿ ಆಸ್ತಿಗಳು ಮಂಜೂರಾಗಿವೆ ಎಂದರೆ ಸಾಕ್ಷಿ, ಆತ ಹಾಗೂ ಆತನ ತಂಗಿಯರ ಪಾಲಿಗೆ ಮಂಜೂರಾಗಿದೆ ಎನ್ನುತ್ತಾರೆ.

7. ಅಂಗಾರ ಪೂಜಾರಿಯ ಜೀವಿತ ಕಾಲದಲ್ಲಿ ವಿಭಾಗ ಪತ್ರ ಆಗಿತ್ತೇ ಎಂದರೆ ಸಾಕ್ಷಿ, ಬಾಯ್ದೆರೆಯಾಗಿ ಆಸ್ತಿ ವಹಿವಾಟು ಪ್ರತ್ಯೇಕವಾಗಿ ಮಾಡುತ್ತಿದ್ದರು ಎನ್ನುತ್ತಾರೆ. ಸಾಕ್ಷಿ ಮುಂದುವರಿದು, ಅಂದಾಜು 90 ಸೆಂಟ್ಸ್ ದರ್ಖಾಸ್ತು ಜಮೀನನ್ನು ಅಂಗಾರ ಪೂಜಾರಿ ತಾನೇ ಇಟ್ಟುಕೊಂಡು, ಉಳಿದ ಗದ್ದೆ ಆಸ್ತಿಯನ್ನು ತನ್ನ ತಂಗಿಯರಿಗೆ ನೀಡಿದ್ದನು ಎನ್ನುತ್ತಾರೆ. ನಿಪಿ.5 ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ದಾಖಲಾತಿಗೆ ನಾನು ಶೇಖರ ಪೂಜಾರಿಯ ಮೊಕ್ತ್ಯಾರನಾಗಿ ಸಹಿ ಮಾಡಿರುತ್ತೇನೆ. ಸದರಿ ವಿಭಾಗ ಪತ್ರವನ್ನು ತಯಾರಿಸಲು ನನ್ನ ತಾಯಿ ಶೇಶಿ ಪೂಜಾರಿ, ತುಂಗು ಹಾಗೂ ಲಕ್ಷ್ಮಿಯ ಮಕ್ಕಳು ಮಾಹಿತಿ ನೀಡಿರುತ್ತಾರೆ. ನಿಪಿ.5ರ ಸಮಯ ಅಂಗಾರ ಪೂಜಾರಿಯವರ ಮಕ್ಕಳಾದ ಪ್ರತಿವಾದಿ ನಂಬ್ರ 22 ರಿಂದ 24 ಮಾತ್ರ ಜೀವಂತ ಇದ್ದರು. ಸಾಕ್ಷಿ ಮುಂದುವರಿದು, ಸದರಿ ಸಮಯ ಅಂಗಾರ ಪೂಜಾರಿಯ ಮಕ್ಕಳು ಪಾಲು ಪಡೆದು ಪ್ರತ್ಯೇಕವಾದ ಕಾರಣ ಅವರು ಸಹಿ ಮಾಡಿಲ್ಲ ಎನ್ನುತ್ತಾರೆ. ನಿಪಿ.5ಕ್ಕೆ ತುಂಗುವಿನ ಮಗಳಾದ ಸಂಕಿ, 5ನೇ ಪ್ರತಿವಾದಿ ವಸಂತ ಹಾಗೂ 7ನೇ ಪ್ರತಿವಾದಿ ಜಯಶ್ರೀ ಸಹಿ ಮಾಡಿಲ್ಲ ಎಂದರೆ ಸಾಕ್ಷಿ, ಅವರ ಪರವಾಗಿ ಅವರ ಸಹೋದರರು ಸಹಿ ಮಾಡಿದ್ದಾರೆ ಎನ್ನುತ್ತಾರೆ. ನಿಪಿ.5ಕ್ಕೆ ವಾದಿ ಶಂಕರ ಪೂಜಾರಿ ಸಹಿ ಮಾಡಿಲ್ಲ.

8. ದಾವಾ ಆಸ್ತಿಯನ್ನು ಕೂಕ್ರ ಪೂಜಾರಿ ಚಾಲಗೇಣಿಗೆ ಪಡೆದುಕೊಂಡ ಬಗ್ಗೆ ದಾಖಲೆಯಲ್ಲಿ ನಮೂದು ಇಲ್ಲ. ಸಾಕ್ಷಿ ಅಂಗಾರ ಪೂಜಾರಿ ಹೇಳುವುದನ್ನು ನಾನು

ಕೇಳಿದ್ದೇನೆ ಎನ್ನುತ್ತಾರೆ. ಚಾಲಗೇಣಿಯ ಬಗ್ಗೆ ಧಣಿಗಳಾದ ಶ್ರೀಕಾಂತ ಆಚಾರ್ಯ ಹಾಗೂ ವ್ಯಾಸರಾಮ ಆಚಾರ್ಯರ ಮಗನನ್ನು ಸಾಕ್ಷಿದಾರರನ್ನಾಗಿ ಕರೆಯಿಸಬಹುದು. ಅಂಗಾರ ಪೂಜಾರಿ ಭೂ ನ್ಯಾಯ ಮಂಡಳಿ ಸಮಕ್ಷಮ ಹಿರಿಯರ ಕಾಲದಿಂದ ಚಾಲಗೇಣಿ ವಹಿಸಿಕೊಂಡು ಬಂದ ಬಗ್ಗೆ ಹೇಳಿದ್ದಾರೆ ಎಂದರೆ ಸಾಕ್ಷಿ, ಅವರ ತಂದೆಯಾದ ಕೂಕ್ರ ಪೂಜಾರಿ ಹಿರಿಯರು ಎನ್ನುತ್ತಾರೆ.

9. ನಿಪಿ.5 ರಲ್ಲಿ ನಮೂದಿಸಿದ ಬಾಯ್ದೆರೆ ಒಡಂಬಡಿಕೆ ಆದಾಗ ನಾನು ಹಾಜರಿರಲಿಲ್ಲ. ನನ್ನ ಪ್ರಕಾರ ನಿಪಿ.5 ಕ್ಕಿಂತ 2-3 ವರ್ಷಗಳ ಹಿಂದೆ ಸದರಿ ಒಡಂಬಡಿಕೆ ಆಗಿರಬಹುದು. ಸದರಿ ಒಡಂಬಡಿಕೆ ಬಗ್ಗೆ ನನ್ನ ತಾಯಿ ಶೇಶಿ ತಿಳಿಸಿದ್ದರು. ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಒಡಂಬಡಿಕೆ ಅಂಗಾರ ಪೂಜಾರಿ, ಶೇಶಿ ಪೂಜಾರಿ ಮತ್ತು ತುಂಗು ಹಾಗೂ ಲಕ್ಷ್ಮೀಯರ ಮಕ್ಕಳ ನಡುವೆ ಆಗಿರುತ್ತದೆ. ಸದರಿ ಬಾಯ್ದೆರೆ ಒಡಂಬಡಿಕೆ ಆದ ನಂತರ ಬೇರೆ ಲಿಖಿತ ಕರಾರು ಆಗಿಲ್ಲ, ನಿಪಿ.5 ರಂತೆ ದಿನಾಂಕ 12-11-1999 ರಂದು ವಿಭಾಗ ಪತ್ರ ಆಗಿದೆ. ಅಂಗಾರ ಪೂಜಾರಿಗೆ ಹಾಗೂ ಆತನ ತಂಗಿಯರ ನಡುವೆ ಪ್ರತ್ಯೇಕ ಹಿಸ್ಸೆ ಆಗಿರುವ ಬಗ್ಗೆ ಬಾಯ್ದೆರೆ ಒಡಂಬಡಿಕೆ ಹೊರತುಪಡಿಸಿ ಬೇರೆ ದಾಖಲೆ ಇಲ್ಲ.

10. ದಾವಾ 7 ನೇ ಆಸ್ತಿ ಅಂಗಾರ ಪೂಜಾರಿಯವರಿಗೆ ಕುಟುಂಬ ಜಂಟಿಯಾಗಿ ಇದ್ದಾಗ ದರ್ಖಾಸ್ತು ಮಂಜೂರು ಆಗಿರುತ್ತದೆ. ಸದರಿ ಆಸ್ತಿಯನ್ನು ಅಂಗಾರ ಪೂಜಾರಿ ತನಗೆ ಇಟ್ಟುಕೊಂಡು ಉಳಿದ ದಾವಾ 1 ರಿಂದ 6 ನೇ ಆಸ್ತಿಯನ್ನು ತನ್ನ ತಂಗಿಯರಿಗೆ ಬಿಟ್ಟುಕೊಟ್ಟಿದ್ದನು ಎನ್ನುತ್ತಾರೆ. ನಿಪಿ.5 ರ ಮೂಲಪ್ರತಿ ಎಲ್ಲಿದೆ ಎಂದು ನಾನು ಹುಡುಕಿ ಹೇಳಬೇಕು. ನಿಪಿ.5 ನ್ನು ವಕೀಲರಾದ ವಿಶ್ವನಾಥ ಶೆಟ್ಟಿಯವರ ಕಛೇರಿಯಲ್ಲಿ ತಯಾರಿಸಲಾಗಿದೆ.

11. ನನ್ನ ತಾಯಿ ನನ್ನ ಪರವಾಗಿ ಬರೆದುಕೊಟ್ಟ ನಿಪಿ.7 ವ್ಯವಸ್ಥಾ ಪತ್ರವನ್ನು ಕೂಡ ವಕೀಲರಾದ ವಿಶ್ವನಾಥ ಶೆಟ್ಟಿಯವರ ಕಛೇರಿಯಲ್ಲಿ ತಯಾರಿಸಲಾಗಿದೆ. ನಿಪಿ.7 ರ

ಮೂಲ ಪ್ರತಿ ನನ್ನ ಮನೆಯಲ್ಲಿ ಇರಬಹುದು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.